JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ನಾಟಕ ಸಾಹಿತ್ಯ: ಒಂದು ವಿವೇಚನೆ

**ಎಂ.ಯುವರಾಜ**
ಸಂಶೋಧನಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಧುನಿಕ ಕನ್ನಡ ಸಾಹಿತ್ಯದ ಆರಂಭಿಕ ಕಾಲಘಟ್ಟದಲ್ಲಿ ಪಶ್ಚಿಮದ ಮತ್ತು ಸಂಸ್ಕೃತದ ನಾಟಕಗಳ ಅನುವಾದ ರೂಪಾಂತರಗಳೇ ಮುಂತಾದವು ನವೋದಯ ಸಾಹಿತ್ಯ ಸಂದರ್ಭದಲ್ಲಿ ಭಾರತೀಯ ಗತವೈಭವದ ಪುನರುಜ್ಜೀವನಕ್ಕೆ ವಸ್ತುವಾಗಿದು. ಪುನ: ಯಜಮಾನ್ಯ–ಶಿಷ್ಟ ಪರಂಪರೆ ನಿರೂಪಿಸಿದ ಚರಿತ್ರೆಯೇ ಹೊರತು ಜಾನಪದವಲ್ಲ: ವೈದಿಕ ಪುರಾಣಗಳ ಮರುರಚನೆ ಮತ್ತು ಗ್ರೀಕ್‌ನ ದುರಂತ ನಾಟಕಗಳ ಮಾದರಿಯನ್ನು ಅನುಸರಿಸಿ ಕನ್ನಡದಲ್ಲಿ ನಾಟಕಗಳು ರಚನೆಗೊಳ್ಳತೊಡಗಿದವು. ಪುರಾಣವನ್ನು ಹೊರತುಪಡಿಸಿದರೆ ನವೋದಯ ಸಾಹಿತ್ಯ ಸಂದರ್ಭದಲ್ಲಿ ಐತಿಹಾಸಿಕ ವಸ್ತು ಪ್ರಾಧಾನ್ಯತೆಯ ಪಡೆಯಿತು. ರಾಜಮಹಾರಾಜರ, ಸ್ವಾತಂತ್ರ್ಯ ಚಳುವಳಿಯ ಘಟನಾವಳಿಗಳು ರಂಗವನ್ನು ತುಂಬಿದವು. ಜಾನಪದವಸ್ತು, ಸಂಗ್ರಹದ ಹಂತದಲ್ಲೇ ಸ್ಥಗಿತಗೊಂಡಿತೆ ಹೊರತು, ಸೃಜನಶೀಲ ಸಾಹಿತ್ಯ ಅಭಿವ್ಯಕ್ತಿಗೆ ಆಕರವಾಗುವಷ್ಟು ನಾಟಕಕಾರರ ಗಮನವನ್ನು ಸೆಳೆಯಲಿಲ್ಲ. ಪಾರಸೀ ನಾಟಕದ ಪ್ರಭಾವದಲ್ಲಿ ರೂಪುಗೊಂಡ ವೃತ್ತಿರಂಗಭೂಮಿಗಳು ಕೂಡ ತಮ್ಮ ಮನರಂಜನೆಯ ಸರಕಾಗಿ ಬಳಸಿಕೊಂಡಿದ್ದು, ಪುರಾಣ–ಇತಿಹಾಸ ಮತ್ತು ಸಾಮಾಜಿಕ ವಸ್ತುಗಳನ್ನೇ, ಜನಪದರ ದಂತಕಥೆಗಳು, ಐತಿಹ್ಯಗಳು, ಕಥನಗೀತೆಗಳು ಆಚರಣೆಗಳು ನಾಟಕದ ವಸ್ತುಗಳಾಗಬಹುದೆಂಬ ಸಾಧ್ಯತೆ ಅಂದು ಹೊಳೆದಂತಿಲ್ಲ, ನಿರಂಕುಷಿಗಳ, ಪಾಮರರ, ಗ್ರಾಮೀಣರ, ದುಡಿವ ವರ್ಗದವರ ಲೋಕದೃಷ್ಟಿಗಳು ನಿರ್ಲಕ್ಷ್ಯಕ್ಕೆ ಗುರಿಯಾದವು. ಅವುಗಳೇನಿದ್ದರೂ ವಸ್ತು ಸಂಗ್ರಹಾಲಯದ ನಿರ್ಜೀವ ವಸ್ತುಗಳಂತೆ ಸಂಗ್ರಹ, ಜೋಡಣೆ, ಸಂರಕ್ಷಣೆಗೆ ಸೀಮಿತವಾದವು. ಅವುಗಳ ಒಳಗಡಗಿರುವ ಅಂತ:ಸತ್ವಗಳು, ಪ್ರತಿಚಿಂತನೆಯ ಅಂಶಗಳು, ಸಾಂಸ್ಕೃತಿಕ ಭಿನ್ನ ಮೌಲ್ಯಗಳು ಜೀವನದೃಷ್ಟಿಗಳನ್ನು ಆಧುನಿಕ ತಿಳಿವು ಮತ್ತು ಸಂವೇದನೆಗಳಿಗೆ ಮುಖಾಮುಖಿಯಾಗಿಸುವತ್ತ ನಮ್ಮ ಸಾಹಿತಿಗಳು, ನಾಟಕಕಾರರು ಗಮನಹರಿಸಲಿಲ್ಲ.

ಪ್ರಗತಿಶೀಲ ಸಾಹಿತ್ಯ ಸಂದರ್ಭದಲ್ಲಿ ದುಡಿವ ವರ್ಗದ ಹೋರಾಟವನ್ನು ಮಾರ್ಕ್ಸವಾದಿ ನೆಲೆಯಲ್ಲಿಯೇ ಗ್ರಹಿಸಲಾಯಿತೇ ಹೊರತು, ನವ್ಯ ಸಾಹಿತ್ಯ ಸಂದರ್ಭದಲ್ಲಿ ಹೊರಗಿನ ತಿಳಿವಿನ ಬೆಳಕಿನಲ್ಲಿ ಕೆಲವು ಪ್ರತಿಭಾವಂತ ನಾಟಕಕಾರರು ಚರಿತ್ರೆಯನ್ನು ಮರುರಚಿಸುವ ಸಂದರ್ಭದಲ್ಲಿ ಜಾನಪದ ವಸ್ತುವನ್ನು ಪರಿಗಣನೆಗೆ ತೆಗೆದುಕೊಂಡರು. ಜೊತೆಗೆ ಜಾನಪದ ರಂಗತಂತ್ರಗಳನ್ನು ತಮ್ಮ ಅಭಿವ್ಯಕ್ತಿಯ ಮಾಧ್ಯಮವಾಗಿ ಬಳಸಿಕೊಂಡರು. ಹವ್ಯಾಸ ರಂಗಭೂಮಿಯ ಕೆಲವು ನಿರ್ದೇಶಕರುಗಳ ವಿಭಿನ್ನ ಪ್ರಯೋಗದ ಹಂಬಲವು ಜಾನಪದದತ್ತ ಚಿತ್ತ ಹೊರಳುವಂತೆ ಮಾಡಿತು.

ಭಾರತೀಯ ಸಾಹಿತ್ಯದ ಇತಿಹಾಸದಲ್ಲಿ ನಾಟಕದ ಉಗಮಕ್ಕೆ ಸಂಬಂಧಿಸಿದಂತೆ, ಹಲವಾರು ಗ್ರಂಥಗಳು ರಚನೆಯಾಗಿವೆ. ಭರತನಾಟ್ಯಶಾಸ್ತ್ರವು, ಅಂತಹ ಪ್ರಧಾನ ಕೃತಿಗಳಲ್ಲೊಂದು. ನಟ್, ನೃತ್ಯ, ನಾಟ್ಯ, ನಾಟಕ, ಇದು ನಾಟಕ ಎಂಬ ಪದ ಬೆಳೆದು ಬಂದ ಬಗೆಯಾಗಿದೆ. ಮೂಲತ: ನೃತ್ಯವಾಗಿದ್ದ ಈ ಅಭಿನಯ ಕಲೆ ಬರುಬರುತ್ತ ಸಂಭಾಷಣೆಗಳನ್ನು ರೂಡಿಸಿಕೊಂಡು ಬೆಳೆದಿದೆ. ಮುದ್ರೆ, ಆಂಗಿಕಾಭಿನಯ, ನೇತ್ರಾಭಿನಯ, ಮುಂತಾದ ಅಂಶಗಳೊಂದಿಗೆ ಒಂದು ಅಥವಾ ವಿವಿಧ ಬಗೆಯ ಭಾವಗಳನ್ನು ನೃತ್ಯದ ಮೂಲಕ ವ್ಯಕ್ತಪಡಿಸುತ್ತಿದ್ದ ಕಲೆಗೆ ಅವಶ್ಯಕತೆಯುಂಟಾಯಿತು. "ನಾಟಕ ಒಂದು ಕಲೆ" ಅದು ಸಂಭಾಷಣೆಯ ರೂಪದಲ್ಲಿರುತ್ತದೆ ಎಂದು ಜಾನ್ ಡಿಟ್ರಿಚ್ ಹೇಳುವ ಮಾತು ಮೇಲಿನ ಅಂಶಕ್ಕೆ ಪೂರಕವಾಗಿದೆ. ನಾಟಕ ಮಾಡುವುದು ಎಂದರೆ ಅಭಿನಯ ಅನುಕರಣೆ ಎಂದರ್ಥ. ಇದು ನಿರಂತರ ವರ್ತಮಾನ ಗುಣವನ್ನು ಹೊಂದಿದೆ.

ಸಂಭಾಷಣೆಯ ಮೆರಗು ಹಾಗೂ ಪ್ರದರ್ಶನದ ಗುಣ, ಪ್ರೇಕ್ಷಕ ಹಾಗೂ ಕಾಲದ ಮಿತಿ ಮತ್ತು ರಂಗದ ಶಿಸ್ತನ್ನು ಈ ಅಭಿನಯ ಕಲೆ ಬಯಸುತ್ತದೆ.

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ರಂಗಭೂಮಿ ಪುನರುಜ್ಜಿವನಗೊಂಡೊಂತಾಯಿತು. ಆಗ ಅನೇಕ ಸಂಸ್ಕೃತ ಮತ್ತು ಇಂಗ್ಲೀಷ್ ನಾಟಕಗಳು ಕನ್ನಡಕ್ಕೆ ಪರಿವರ್ತಿತವಾದವು. ಮೈಸೂರು ಮಹಾರಾಜರವರ ಕೃಪಾಪೋಷಣೆಯಲ್ಲಿ ನಾಟಕ ಕಲೆ ವೃದ್ಧಿಗೊಂಡಿತು. ಆ ಕಾಲದಲ್ಲಿ ನಾಟಕಗಳ ಜೊತೆಗೆ ಕೆಲವು ಪ್ರಹಸನಗಳೂ ಕನ್ನಡದಲ್ಲಿ ಮೈಧೋರಿದವು. ಕೇವಲ ಕ್ಷಣಕಾಲದ ವಿನೋಧವಷ್ಟೇ ಅವುಗಳ ಗುರಿ, ನಾಟಕ ಪ್ರದರ್ಶನ ಪ್ರಾರಂಭವಾಗುವುದು ತಡವಾದಾಗ ಪ್ರೇಕ್ಷಕರ ವರ್ಗದಲ್ಲಿ ಏಳಬಹುದಾದ ಕೋಲಾಹಲವನ್ನು ತಡೆಗಟ್ಟುವುದಕ್ಕಾಗಿ ಇವುಗಳನ್ನು ಪ್ರಯೋಗಿಸುವುದು ರೂಢಿಗೆ ಬಂತು. ಇವುಗಳಲ್ಲಿ ಕಾಣಬರುವ ನಾಟಕಾರರ ಅಭಿರುಚಿ ಮತ್ತು ಹಾಸ್ಯದ ಸದಾ ಸೃಷ್ಟಿ ಶಕ್ತಿ ಜೀವನವನ್ನೇ ಸೂಚಿಸುತ್ತದೆ. ಆದ್ದರಿಂದ ಒಂದು ದೃಷ್ಟಿಯಿಂದ ಸಾಮಾಜಿಕ ನಾಟಕವೇ ಅವುಗಳನ್ನು ಬಳಸಿಕೊಂಡು ಕೇವಲ ವಿನೋದಕ್ಕಾಗಿ, ಸಮಕಾಲೀನವಾದ ಸಮಾಜದಲ್ಲಿ ಕಾಣಬರುವ ಲೋಪದೋಷಗಳಿಗೆ ಅತಿರೇಕದ ಬಣ್ಣ ಕೊಟ್ಟ ಜನರನ್ನು ನಗೆಸುವಷ್ಟರಿಂದಲೇ ಅವುಗಳ ಅಸ್ತಿತ್ವ ಸಾರ್ಥಕಗೊಂಡಿತು. ಇದೇ ಸಮಯದಲ್ಲಿಯೇ ಇಂಗ್ಲೀಷ್ ನಾಟಕಗಳನ್ನು ಭಾಷಾಂತರ ಮಾಡಿಕೊಳ್ಳುವ ಕಾರ್ಯ ಆರಂಭವಾಯಿತು. ತಮ್ಮ ಸುತ್ತಮುತ್ತಲಿನ ಜನಜೀವನವನ್ನೇ ಆಧರಿಸಿಕೊಂಡು ಬರೆಯಬಲ್ಲ ಅವರ ಕಲಾಶಕ್ತಿಯಿಂದ ಸ್ವತಂತ್ರ ಕೃತಿ ಎನ್ನುವಷ್ಟು ಮನೋಹರವಾಗಿದೆ. ಇತಿಹಾಸವು ಗತಕಾಲದ ಘಟನೆಗಳ ಅಧ್ಯಯನವೆಂದು.

ಅವಲೋಕನವೆಂದೂ ಇತಿಹಾಸಕಾರರು ವ್ಯಾಖ್ಯಾನಿಸುತ್ತಾರೆ. ಇಸವಿ ಮತ್ತು ಘಟನೆಗಳನ್ನು ಜೋಡಿಸಿಕೊಳ್ಳುತ್ತಾ ಸಾಗುವ ಇತಿಹಾಸದ ಕ್ರಮ, ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ವಿವರಗಳನ್ನು ಕ್ರಮಬದ್ಧವಾಗಿ ದಾಖಲಿಸುತ್ತದೆ. ಆದರೆ ಸಾಹಿತ್ಯವು ಸಮಕಾಲಿನ ಘಟನೆಗಳನ್ನು ಇತಿಹಾಸದೊಂದಿಗೆ ಪೃಥಃಕ್ಕರಿಸಿ ತನ್ನ ಕಲ್ಪನೆಯನ್ನು ಅದರೊಂದಿಗೆ ಹೊಸ ಬಗೆಯ ದೃಷ್ಟಿಕೋನವನ್ನು ಅಭಿವ್ಯಕ್ತಿಸುತ್ತದೆ. ಐತಿಹಾಸಿಕ ಸಂದರ್ಭಗಳನ್ನು ಕುರಿತ ಊಹೆ ಮತ್ತು ಇಂಗಿತ ಜ್ಞಾನವನ್ನು ಪ್ರಕಟಿಸಲು ಕಾವ್ಯ, ಕಥೆ, ಕಾದಂಬರಿ ಮತ್ತು ನಾಟಕ ಮುಂತಾದ ಸಾಹಿತ್ಯ ವಿಧಾನವೆ ಉತ್ತಮ ಮಧ್ಯಮಾಗುತ್ತದೆ. ಆದರೆ ಇತಿಹಾಸವು ನಾಟಕಕ್ಕೆ ಸ್ಥೂಲವಾದ ರೇಖಾವಿನ್ಯಾಸವನ್ನು ಮಾತ್ರ ಒದಗಿಸುತ್ತದೆ. ಅದರೊಳಗೆ ಬಣ್ಣ ಭಾವವನ್ನು ತುಂಬಿ ಸುಂದರ ವರ್ಣಚಿತ್ರವನ್ನು ಸೃಷ್ಟಿಸುವುದು, ಕಲಾವಿಧಾನವಾದ ನಾಟಕಕಾರನ ಕೆಲಸವಾಗಿದೆ. ಕಲ್ಪನೆ ಮತ್ತು ಊಹೆಗಳಿಗೆ ಧಾರಾಳ ಅವಕಾಶವಿರುವುದರಿಂದ ಸಾಹಿತ್ಯ ಮಾಧ್ಯಮದಲ್ಲಿ ಪ್ರಕಟವಾಗುವ ಇತಿಹಾಸ ಸಹಜವಾಗಿಯೇ ವರ್ಣ ರಂಜಿತವಾಗಿರುತ್ತದೆ. ಸಮಕಾಲಿನ ರಾಗದ್ವೇಷಗಳು ಇತಿಹಾಸದ ವೇಷತೊಟ್ಟು ನಾಟಕವನ್ನು ಅವರಿಸಬಹುದು. ಸಮಕಾಲೀನ ಜೀವನ ವಿಧಾನ, ನಂಬಿಕೆ ಧೋರಣೆಗಳನ್ನು ಇತಿಹಾಸದ ಸಂದರ್ಭದಲ್ಲಿಟ್ಟು ಶೋಧಿಸುವ ನಾಟಕಗಳಲ್ಲಿ ಗೌಣಸ್ಥಾನವಿದ್ದು ಅದರ ಧ್ವನ್ಯಾರ್ಥವನ್ನು ನಾಟಕೀಯವಾಗಿ ನಿರೂಪಿಸುವುದಕ್ಕೆ ಪ್ರಾಮುಖ್ಯತೆಯಿರುತ್ತದೆ.

ನಾಟಕವೆಂದರೆ ರಂಗದ ಮೇಲೆ ಅಭಿನಯಿಸಬಹುದಾದ ಒಂದು ಸಾಹಿತ್ಯ ಪ್ರಕಾರವೆಂಬುದು ನಾಟಕ ಬರೆಯುವವರ, ಓದುವವರು, ಆಡುವವರು ಹಾಗೂ ನೋಡುವವರ ಗ್ರಹಿಕೆಯಾಗಿತ್ತು, ಆದರೆ ಇತ್ತೀಚಿಗೆ ರಂಗ ಪ್ರಯೋಗವನ್ನು ಒಂದು ತಂತ್ರವನ್ನಾಗಿ ಅಭ್ಯಾಸ ಮಾಡಿಬಂದ ಪ್ರತಿಭಾವಂತ ಮತ್ತು ಬುದ್ಧಿವಂತ ನಿರ್ದೇಶಕರು ನಾಟಕಗಳನ್ನು ಆಡಿಸಲು ಪ್ರಾರಂಭಿಸಿದ ಮೇಲೆ, ರಂಗದ ಮೇಲೆ ಬಂದಾಗಲೆ ನಾಟಕದ ಸರಿಯಾದ ಹಾಗೂ ಸಂಪೂರ್ಣವಾದ ಅಭಿವ್ಯಕ್ತಿ ಸಾಧ್ಯ. ನಾಟಕಕಾರ ಬರೆದಿದ್ದು ತನ್ನಷ್ಟಕ್ಕೆ ಸಂಪೂರ್ಣವಾದ ನಾಟಕವಲ್ಲ. ಅದು ನಿರ್ದೇಶಕ ತನಗೆ ಸರಿ ಕಂಡಂತೆ ರಂಗದ ಮೇಲೆ ಆಡಿಸಲು ಉಪಯೋಗಿಸಿಕೊಳ್ಳಬಹುದಾದ ಒಂದು ಕಚ್ಚಾ ವಸ್ತುಯೆಂದಾಯಿತು. ನಾಟಕ ಪ್ರಯೋಗಗಳ ಉಜ್ವಲತೆ, ಅದಕ್ಕೆ ಸಿಕ್ಕ ಪ್ರಚಾರಗಳಿಂದಾಗಿ ಇಂತ ನಿರ್ದೇಶಕರರು ತಮ್ಮ ನಾಟಕಗಳನ್ನು ಆಡಿಸಿದ್ದೆ ದೊಡ್ಡ ಭಾಗ್ಯಯೆಂಬ ನಂಬಿಕೆ ಲೇಖಕರಲ್ಲೂ ಬೆಳೆಯಿತು. ಪರಿಣಾಮವಾಗಿ ಲೇಖಕ ಇಂದು ಮುಖ್ಯವೇ ಅಲ್ಲ, ಲೇಖಕರ ಬರಹವನ್ನು ಆಧಾರವಾಗಿಟ್ಟುಕೊಂಡು ತಕ್ಕಮಟ್ಟಿನ ಲೇಖಕನ ಬರಹವನ್ನು ಆಧಾರವಾಗಿಟ್ಟುಕೊಂಡು ತಕ್ಕಮಟ್ಟಿನ ಲೇಖನ ಸಾಮರ್ಥ್ಯಯುಳ್ಳ ನಿರ್ದೇಶಕ ತನ್ನದೆ ಒಂದು ನಾಟಕವನ್ನು ತಯಾರಿಸಿಕೊಂಡು ರಂಗದ ಮೇಲೆ ಆಡಿಸುತ್ತಾನೆ.

ಒಂದು ನಾಟಕ ರಂಗಭೂಮಿಯ ಮೇಲೆ ಯಶಸ್ವಿಯಾಗಲು ಶೈಲಿ, ತಂತ್ರ, ಆಸಕ್ತಿ ಹುಟ್ಟಿಸುವ ವಸ್ತು, ಸಂಭಾಷಣೆ, ಸನ್ನಿವೇಶಗಳು, ನಟನೆ ಬೆಳಕಿನ ವ್ಯವಸ್ಥೆ, ಧ್ವನಿವ್ಯವಸ್ಥೆ, ಪ್ರೇಕ್ಷಕರ ಅಭಿರುಚಿ ಹೀಗೆ ಇನ್ನೂ ಎಷ್ಟೇ ಸಂಗತಿಗಳು ನೆರವಾಗಬಹುದು, ಆದರೆ ಪ್ರದರ್ಶನ ಯಶಸ್ಸು ತೀರಾ ಸಂದಿಗ್ಧವಾದ ಮಾನದಂಡ, ಒಂದು ನಾಟಕವನ್ನು ಯಶಸ್ವಿಯಾಗಿ ರಂಗದ ಮೇಲೆ ತರಬಹುದೆಂದು ಅನಿಸಿದರೆ ಸಾಕೆ, ಒಂದೆರಡು ಯಶಸ್ವಿಯಾಗಿ ಪ್ರಯೋಗಗಳು ಸಾಕೆ' ಅಥವಾ ಹಲವರ ನೂರಾರು ಯಶಸ್ವಿ ಪ್ರಯೋಗಗಳು ಆಗಬೇಕೆ ಲಂಡನ್ನಿನ ಒಂದು ಥಿಯೇಟರಿನಲ್ಲಿ ಎಂಬ ನಾಟಕ ಇಪ್ಪತ್ತು ವರ್ಷಗಳಿಂದ ಅಖಂಡವಾಗಿ ನಡೆಯುತ್ತಿದ್ದು ದಾಖಲೆ ಸ್ಥಾಪಿಸಿದೆ. ಇದು ಯಶಸ್ವಿ ನಾಟಕವೆ?

ಸಾಹಿತ್ಯದಲ್ಲಿ ಆಸಕ್ತಿಯುಳ್ಳವರು ವರ್ಷದಲ್ಲಿ ಒಂದು ಸಲವೂ ಎರಡು ಸಲವೂ, ಹೇಗಿದ್ದರು ನೋಡಿ ಆನಂದಿಸುವ ಶೇಕ್ಸಪಿಯರನ ನಾಟಕ ಯಶಸ್ವಿಯ ನಾನು ಹೇಳುವುದಿಷ್ಟೆ ಒಂದು ನಾಟಕ ಸಾಹಿತ್ಯದ ಮಹತ್ವವನ್ನು ಅದರ ರಂಗ ಪ್ರದರ್ಶನದ ಯಶಸ್ಸುಗಳಿಂದ ನಿರ್ಧರಿಸಬಾರದು. ಸಾಹಿತ್ಯಕ ಮಹತ್ವ ಎಂಬುದನ್ನು ಬದುಕಿನ ಬಗ್ಗೆ ಆ ಕೃತಿ ತಳೆಯುವ ಧೋರಣೆ, ಮೌಲ್ಯವಿವೇಚನೆಯ ಸಧುತ್ವ, ವಸ್ತುವಿನ ಸೂಕ್ಷ್ಮಗಳನ್ನು ಸಮರ್ಥವಾಗಿ ನಿಭಾಯಿಸುತ್ತಾನೆ.

ಕನ್ನಡದ ಮೊದಲ ನಾಟಕ: ಆಧುನಿಕ ಕನ್ನಡ ಸಾಹಿತ್ಯದಲ್ಲಿ ನಾಟಕ ಒಂದು ಸಾಹಿತ್ಯದ ಪ್ರಕಾರವಾಗಿದ್ದರೂ ಉಳಿದ ಸಾಹಿತ್ಯ ಪ್ರಕಾರಗಳಗಿಂತ ಭಿನ್ನವಾದ ಪ್ರಕಾರವಾಗಿದೆ. ನಾಟಕ ಎನ್ನುವುದು ಒಂದು ಕ್ರಿಯೆಯ ಅನುಕರಣ ಇಂತಹ ಅನುಕರಣಾ ಕ್ರಿಯೆಯಿಂದ ಹುಟ್ಟಿದ ನಾಟಕ ಪ್ರಕಾರವು ಸಾಹಿತ್ಯ ಪ್ರಕಾರದಲ್ಲೂ, ದೃಶ್ಯ ಮಾಧ್ಯಮ ಪ್ರಕಾರದಲ್ಲೂ ಪ್ರಮುಖ ಸ್ಥಾನಗಳಿಸಿದೆ. ಜನಪದ ರಂಗಭೂಮಿ ಮೂಲವಾಗಿದ್ದು ಆಧುನಿಕ ಕನ್ನಡ ನಾಟಕ ಪ್ರಕಾರ ಸಂಸ್ಕೃತ ಮತ್ತು ಇಂಗ್ಲೀಷ್ ನಾಟಕಗಳಿಂದ ಪ್ರೇರಿತವಾದದ್ದು ಎಂಬುದು ಕನ್ನಡ ನಾಟಕಗಳ ಹುಟ್ಟು ಮತ್ತು ಇತಿಹಾಸವನ್ನು ಗಮನಿಸಿದಾಗ ತಿಳಿದು ಬರುತ್ತದೆ.

ಮೈಸೂರಿನ ಚಿಕ್ಕದೇವರಾಯನ ಆಸ್ಥಾನದಲ್ಲಿದ್ದ ಸಿಂಗರಾರನಿಂದ ರಚನೆಯಾದ ಮಿತ್ರವಿಂದ ಗೋವಿಂದ (೧೬೮೦) ನಾಟಕವೇ ಕನ್ನಡದಲ್ಲಿ ಲಭ್ಯವಾಗಿರುವ ಪ್ರಥಮ ನಾಟಕ, ಆದರೆ ಇದು ಸಂಸ್ಕೃತದ ಶ್ರೀಹರ್ಷನ ರತ್ನಾವಳಿ ನಾಟಕದ ರೂಪಾಂತರ. ಇಲ್ಲಿಯ ಹಳೆಗನ್ನಡವು ಚಿಕ್ಕದೇವರಾಯನ ಕಾಲದಲ್ಲಿ ತಿರುಮಲಾರ್ ಮೊದಲಾದ ಚಂಪೂ ಕವಿಗಳು ತಮ್ಮ ಕೃತಿಯಲ್ಲಿ ಬಳಸುತ್ತಿದ್ದ ಹೊಸ ಕಾಲದ ಭಾಷೆ, ಶೈಲಿಗಳ ಧೋರಣೆಗೆ ಅನುಗುಣವಾದದ್ದು. ನಾಲ್ಕು ಅಂಕಗಳಲ್ಲಿ ರಚಿತವಾಗಿರುವ ಇದು ಚಂಪೂ ಶೈಲಿಯಲ್ಲಿ ರಚಿತವಾಗಿದೆ.

ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಚುರುಮುರಿ ಶೇಷಗಿರಿರಾಯರ ಮತ್ತು ಬಸಪ್ಪ ಶಾಸ್ತ್ರಿಗಳಿಂದ ಆರಂಭವಾಗಿ ಆಧುನಿಕ ನಾಟಕದ ಪರಂಪರೆಯು ಭಾಷಾಂತರ ನಾಟಕಗಳೇ ಕನ್ನಡ ರಂಗಭೂಮಿಯಲ್ಲಿ ವಿಜೃಭಿಸಿದವು. ನವೋದಯದವರೆಗೂ ಮೈಸೂರಿನಲ್ಲಿ ಅಸ್ತಿತ್ವಕ್ಕೆ ಬಂದ ಶ್ರೀ ಚಾಮರಾಜೇಂದ್ರ ಕನ್ನಡ ನಾಟಕ ಸಭೆಯ ಕೋರಿಕೆಯನ್ನು ಪೂರೈಸಲು ಅರಮನೆಯ ವಿದ್ವಾಂಸರು ನಾಟಕಗಳನ್ನು ರಚಿಸಲು ಮುಂದಾದರು. ಅವರಲ್ಲಿ ಪ್ರಮುಖರಾದವರು ಬಸಪ್ಪ ಶಾಸ್ತ್ರಿಗಳು ಇವರು ಶಾಕುಂತಲ, ವಿಕ್ರಮೋರ್ವಶೀಯ, ರತ್ನಾವಳಿ, ಉತ್ತರ ರಾಮ ಚರಿತ್ರೆ, ಮಾಲತೀ ಮಾಧವ, ಚಂಡಕೌಶಿತ, ಮುಂತಾದ ಸಂಸ್ಕೃತದ ನಾಟಕಗಳನ್ನು ಭಾಷಾಂತರಿಸಿದರು ಇವುಗಳಲ್ಲಿ ಶಾಸ್ತ್ರೀಗಳು ಅನುವಾದಿಸಿದ ಶಾಕುಂತಲ (೧೮೮೩) ಕನ್ನಡ ನಾಟಕ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಗಳಿಸಿತು.

ನಾಟಕವೆಂಬುದು ರಂಗಭೂಮಿಯ ಸಲುವಾಗಿಯೇ ರಚಿಸಲ್ಪಟ್ಟಿದ್ದರೂ ಅದು ಒಂದು ಪ್ರಕಾರವೂ ಆಗಿದೆ. ಪ್ರಾಚೀನ ಕಾಲದಿಂದಲೂ ಎಲ್ಲಾ ದೇಶಗಳಲ್ಲಿಯೂ ನಾಟಕವನ್ನು ಸಾಹಿತ್ಯದ ಅಂಗವಾಗಿಯೇ ಪರಿಗಣಿಸಿದ್ದಾರೆ. ಒಂದೊಂದು ಸಂಸ್ಕೃತಿಗಳಲ್ಲಿಯೂ ನಾಟಕದ ಹುಟ್ಟಿಗೆ ಕಾರಣವಾಗಿರುವ ಸಂದರ್ಭಗಳು ಏಕ ರೀತಿಯಲ್ಲಿವೆ. ಕಾಮನ ಬಿಲ್ಲಿನಂತೆ ರಸವೂ ರಸವೊರಿಸುವ ಲಲಿತಕಲೆಗಳ ಮೇಳವಾಗಿರುವ ನಾಟಕವೆಂದರೆ ತಜ್ಞರ ಪ್ರಕಾರ ಅಭಿಪ್ರಾಯದಂತೆ ಮನಸ್ಸನ್ನು ರಚಿಸಿ, ಆತ್ಮವನ್ನು ಮೇಲೆತ್ತುವ ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪ, ಅಭಿನಯಗಳು ಮೇಳವಿಸಿ ರಸ ನಿರೂಪಣೆ ಮಾಡುವ ಉದ್ದೇಶದಿಂದ ಮೈತಳೆದ ನಾಟಕ ಬಹುಜನ ಪ್ರಿಯವಾದ ಒಂದು ದೃಶ್ಯಕಾವ್ಯವಾಗಿದೆ. ಅದರ ವೈಶಿಷ್ಟ್ಯ ಪ್ರಭಾವಗಳನ್ನು ಗುರುತಿಸಿದ ಪ್ರಾಚೀನರು ಕಾವೇಷು ನಾಟಕಂ ರಮ್ಯಂ ಎಂದರು.

ನಾಟಕವನ್ನು ಸೃಷ್ಟಿಸಿದ ಬ್ರಹ್ಮನು ಇದೆ ಮಾತನ್ನೇ ದೂರು ಹೊತ್ತು ತಂದರು ಬಂದ ದಾನವರಿಗೆ ಹೇಳಿದನಂತೆ, ನಾಟಕವೇಂದರೆ ಕೇವಲ ಪ್ರಚಾರ ಸಾಧನವಲ್ಲ ಮೂರು ಲೋಕಗಳ ಧರ್ಮದ ಪ್ರತಿಬಿಂಬ ಅದು ಧಾರ್ಮಿಕ ಪ್ರವೃತ್ತಿಯವರಿಗೆ ಅದು ಧರ್ಮ ಮಾರ್ಗವನ್ನು ಹೊಳೆಯಿಸಿತ್ತದೆ. ವಿಲಾಸಿಗಳಿಗೆ ದಿವ್ಯಾ ಪ್ರೇಮದ ಮಾಹಿತಿಯನ್ನು, ಅಜ್ಞಾನಿಗಳಿಗೆ ಸುಜ್ಞಾನವನ್ನು, ಪಂಡಿತರಿಗೆ ವಿಮರ್ಶ ವಿಧಾನವನ್ನು, ನೋಂದವರಿಗೆ ಸಾಂತ್ವನವನ್ನು ಅದು ನೀಡುತ್ತದೆ. ನಾಟಕದಲ್ಲಿ ಅಲ್ಲದೆ ಮನೋರಂಜನೆಯೊಂದಿಗೆ ಜಿಜ್ಞಾಸೆ, ಆಕರ್ಷಣೆಯೊಂದಿಗೆ ಸುಜ್ಞಾನ ಹಾಗೂ ಸೌಂದರ್ಯದೊಂದಿಗೆ ಶಾಸ್ತ್ರ ಸಿಕ್ಕಿತು. ಹೀಗೆಂದು ಕೇಳಿ ಸೃಷ್ಠಿಕರ್ತನು ದಾನವನ ಮನವೊಪ್ಪಿಸಿದನೆಂದು ನಾಟ್ಯಶಾಸ್ತ್ರ ಹೇಳುತ್ತದೆ. ಒಂದು ಪುಸ್ತಕ ಮಾಡುವುದಕ್ಕಿಂತ ನೂರು ಪಾಲು ಹೆಚ್ಚಿನ ಸಾಧನೆಯನ್ನು ನಾಟಕ ಮಾಡಬಲ್ಲದಾಗಿದೆ. ವಿಚಾರವಂತನಿಗೆ ಬದುಕಿನ ರಹಸ್ಯವನ್ನು, ಸಾಮಾನ್ಯನಿಗೆ ಜೀವನ ತತ್ವವನ್ನು, ಕಲಾವಿದನಿಗೆ ಕಲ್ಪನಾ ಸೃಷ್ಠಿಯನ್ನು ವೈಭವವನ್ನೂ, ತಾಮಸಿಗೆ ಭಾಷೆಯ ಬೆಳಕು ಬೆಡಗುಗಳನ್ನೂ, ಅರಸಿಕನಿಗೆ ಬಾಳಿನ ವಿನೋದವನ್ನು, ಅದು ಉಣ ಬಡಿಸಿತ್ತದೆ ಎಂದು ಹೆನ್ರಿ ಆರಿಂಗ ನುಡಿದ ಮಾತು ಗಮನಾರ್ಹವಾಗಿದೆ. ಈ ಎಲ್ಲಾ ಕಾರಣದಿಂದಾಗಿ ಪ್ರಾಚೀನ ಕಾಲದಿಂದಲೂ ನಾಟಕವೂ ಕಾವೇಷು ನಾಟಕಂ ರಮ್ಯಂ ಎಂಬ ಕೀರ್ತಿ ಹೊತ್ತು ಒಂದು ದೇಶದ ಸಾಹಿತ್ಯದಲ್ಲಿ ಹಿರಿಮೆಯ ಸ್ಥಾನವನ್ನೂ ಪಡೆದುಕೊಂಡಿದೆ.

**ಪರಾಮರ್ಶನ ಗ್ರಂಥಗಳು**


೧. ಅಕ್ಷರ, ಕೆ. ವಿ. ರಂಗ ಪ್ರಪಂಚ, ಅಕ್ಷರ ಪ್ರಕಾಶನ, ಸಾಗರ, ೧೯೯೪.

೨. ಗಿರಡ್ಡಿ ಗೋವಿಂದರಾಜು, ಸಮಗ್ರ ವಿಮರ್ಶೆ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೧. ಗಿರೀಶ್ ಕರ್ನಾಡ, ಸಮಗ್ರ ನಾಟಕ, ಮನೋಹರ ಗ್ರಂಥ ಮಾಲಾ, ಧಾರವಾಡ, ೨೦೧೧.

೩. ಮರುಳಸಿದ್ದಪ್ಪ, ಆಧುನಿಕ ಕನ್ನಡ ನಾಟಕ, ಅಪಿ ಪ್ರಕಾಶನ, ಬೆಂಗಳೂರು, ೧೯೯೩.

೪. ಶ್ರೀರಂಗ, ಕನ್ನಡ ರಂಗಭೂಮಿ ನಡೆದು ಬಂದ ದಾರಿ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೭.